**By Regd.post ack/due**

**KARNATAKA STATE HUMAN RIGHTS COMMISSION**
**4TH Floor, 5th Phase, Multi Storied Buildings, Bangalore - 560001**
**Phone: 080-22392200, Fax: 22392207**

No.HRC/RTI/LAW/19/2023 Dt: 03.05.2023

ಗೆ,

ಬಿ ಎಸ್ ಗೌಡಯ್ಯ,
ಬಿನ್ ಲೇಟ್ ಹೆಚ್.ಎಲ್ ಶಿವರಾಮಯ್ಯ,
ಬೆಳ್ಳೂರು ಟೌನ್, ಬೆಳ್ಳೂರು ಹೋಬಳಿ,
ನಾಗಮಂಗಲ ತಾಲ್ಲೂಕು,
ಮಂಡ್ಯ ಜಿಲ್ಲೆ-571418.

ಮಾನ್ಯರೇ,

ವಿಷಯ: ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ ಅಧಿನಿಯಮ 2005ರಡಿ
ಮಾಹಿತಿ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಅರ್ಜಿ ದಿನಾಂಕ: 27.04.2023.

********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಮಗೆ ತಿಳಿಸುವುದೇನೆಂದರೆ "ಮಾಹಿತಿ ಹಕ್ಕು ಅಧಿನಿಯಮ-2005ರ ನಿಯಮ 14ರ ಪ್ರಕಾರ ಮಾಹಿತಿಯ ಲಿಖಿತ ಕೋರಿಕೆಯು ಒಂದು ವಸ್ತು ವಿಷಯಕ್ಕೆ ಸಂಬಂಧಿಸಿರತಕ್ಕದ್ದು ಮತ್ತು ಅದು ಸಾಮಾನ್ಯವಾಗಿ ಒಂದು ನೂರಾ ಐವತ್ತು ಪದಗಳಿಗೆ ಮೀರತಕ್ಕದಲ್ಲ. ಅರ್ಜಿದಾರನು ಒಂದಕ್ಕಿಂತ ಹೆಚ್ಚಿನ ವಸ್ತು ವಿಷಯಗಳ ಬಗ್ಗೆ ಮಾಹಿತಿ ಕೋರ ಬಯಸಿದ್ದರೆ ಅವನು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಪರಂತು ಸಲ್ಲಿಸಲಾದ ಕೋರಿಕೆಯು ಒಂದಕ್ಕಿಂತ ಹೆಚ್ಚಿನ ವಸ್ತುಗಳಿಗೆ ಸಂಬಂಧಿಸಿದ್ದ ಸಂಧರ್ಭದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಮೊದಲ ವಸ್ತು ವಿಷಯಕ್ಕೆ ಸಂಬಂಧಿಸಿದ ಕೋರಿಕೆಗೆ ಮಾತ್ರ ಉತ್ತರ ನೀಡತಕ್ಕದ್ದು ಮತ್ತು ಪ್ರತಿ ಇತರ ವಸ್ತು ವಿಷಯಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವಂತೆ ಅರ್ಜಿದಾರನಿಗೆ ಸಲಹೆ ಮಾಡಬಹುದು".

ಆದ್ದರಿಂದ ತಮ್ಮ ಅರ್ಜಿಯಲ್ಲಿ ಕೋರಿರುವ ಮೊದಲ ಮಾಹಿತಿಯ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಒದಗಿಸಲಾಗಿದೆ.

| ಕ್ರ. ಸಂ | ಅರ್ಜಿಯಲ್ಲಿ ಕೋರಿರುವ ಮಾಹಿತಿ | ಒದಗಿಸಲಾದ ಮಾಹಿತಿ |
|---|---|---|
| 1 | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿ, ಬೆಳ್ಳೂರು ಟೌನ್‌ನ ಬೊಮ್ಮನಹಳ್ಳಿ-ಎಲ್ಲಾದಹಳ್ಳಿ ಗ್ರಾಮದ ರಸ್ತೆಯಲ್ಲಿ ಉಂಟಾಗುತ್ತಿರುವ ಮಾನವಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ-ಬೆಂಗಳೂರುರವರ ಪ್ರಕರಣ ಮಾಹಆ 2966/10/14/2022 ಸಿಡಬ್ಯು (ಬಿ-2) & 2209/10/14/2022 ರ ಅಂತಿಮ ಆದೇಶದ ದೃಢೀಕೃತ ಪ್ರತಿಗಳು | ಪ್ರಕರಣದಲ್ಲಿ ದೂರುದಾರರು ಅಭಿಪ್ರಾಯವನ್ನು ಸಲ್ಲಿಸಿದ್ದಾರೆ. ಪ್ರಕರಣದ ಮುಂದಿನ ದಿನಾಂಕ: 05.06.2023 ಆಗಿರುತ್ತದೆ. ಪ್ರಕರಣದಲ್ಲಿ ಇನ್ನೂ ಅಂತಿಮ ಆದೇಶವನ್ನು ಹೊರಡಿಸಿರುವುದಿಲ್ಲ ಎಂಬ ಮಾಹಿತಿಯನ್ನು ಒದಗಿಸಲಾಗಿದೆ. |

ಮುಂದುವರಿದು ಸದರಿ ಅರ್ಜಿಯಲ್ಲಿ ಕೋರಿರುವ ಉಳಿದ ಮಾಹಿತಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿದೆ.

ತಾವು ಕಳುಹಿಸಿದ ರೂ.10/- 60F 883958 ಮುಖಬೆಲೆಯ ಪೋಸ್ಟಲ್ ಆರ್ಡರ್ ಈ ಕಛೇರಿಯಲ್ಲಿ ಸ್ವೀಕೃತವಾಗಿದೆ ಎಂದು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

3/5

ಸಾರ್ವಜನಿಕ ಮಾಹಿತಿ ಅಧಿಕಾರಿ
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

Rd
MG